ಶ್ರೀ ವಾಟಾಳ್ ನಾಗರಾಜ್ :– ಅರ್ಧಗಂಟೆ ಚರ್ಚೆಗೆ ತಾವು ತೆಗೆದುಕೊಳ್ಳಿ.

ಅಧ್ಯಕ್ಷರು :– ಕೊಡೋಣ.

ಶ್ರೀ ಡಿ.ಟಿ. ಜಯಕುಮಾರ್ :– ಆಗಬಹುದು.

<u>ಪ್ರೌಢ ಶಾಲೆಗಳಿಗೆ ಬಿಸಿಯೂಟದ ಸಲುವಾಗಿ ತಟ್ಟೆಗಳನ್ನು ಸರಬರಾಜು ಮಾಡುವುದು :–</u>

112 (624) ಶ್ರೀ ಗಂಗಾಧರ್ ನಾಗೇಶ್ ಭಟ್ (ಕಾರವಾರ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾರವಾರ ಹಾಗೂ ಜೋಯಡಾ ಕ್ಷೇತ್ರದ ಪ್ರೌಢ ಶಾಲೆಗಳಿಗೆ ಬಿಸಿಯೂಟ ಯೋಜನೆ ಜಾರಿ ಮಾಡಲು ಮಕ್ಕಳಿಗೆ ತಟ್ಟೆಗಳು ಸರಬರಾಜು ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಬಿಸಿಯೂಟಕ್ಕೆ ತಟ್ಟೆಗಳನ್ನು ಯಾವಾಗ ಪೂರೈಸಲಾಗುವುದು;

ಇ) ಪೂರೈಸದೇ ಇದ್ದಲ್ಲಿ ಬಿಸಿಯೂಟಕ್ಕೆ ತಟ್ಟೆಗಳನ್ನು ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯಡಿ ಪಡೆಯಬಹುದೆ;

ಈ) ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಿಗೆ ಡೆಸ್ಕ್ ಮತ್ತು ಬೆಂಚುಗಳ ಕೊರತೆ ಇರುವುದು ಸರ್ಕಾರ ಗಮನಕ್ಕೆ ಬಂದಿದೆಯೇ;

ಉ) ಕೊರತೆ ಇರುವ ಡೆಸ್ಕ್ ಮತ್ತು ಬೆಂಚ್‌ಗಳನ್ನು ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯಡಿ ಪಡೆಯಬಹುದೇ (ವಿವರ ನೀಡುವುದು) ?

ಶ್ರೀ ಬಸವರಾಜ್ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಹೌದು

ಆ) ಬಿಸಿಯೂಟ ಯೋಜನೆಯಡಿ ತಟ್ಟೆಗಳನ್ನು ಸರಬರಾಜು ಮಾಡುವುದಕ್ಕೆ ಅವಕಾಶ ಕಲ್ಪಿಸಿರುವುದಿಲ್ಲ.

ಇ) ಯೋಜನೆ ಇಲಾಖೆಯ ಆದೇಶದನ್ವಯ ಇದನ್ನು ಪಡೆಯಲು ಸಾಧ್ಯವಿಲ್ಲ.

ಈ) ಹೌದು.

ಉ) ಯೋಜನಾ ಇಲಾಖೆಯು ದಿನಾಂಕ 03-09-2005 ರಲ್ಲಿ ಹೊರಡಿಸಿರುವ ಆದೇಶದನ್ವಯ ಸರ್ಕಾರಿ ಪ್ರೌಢ ಶಾಲೆಗಳಿಗೆ ಮಾತ್ರ ಸೀಮಿತವಾಗಿರುವಂತೆ ಬೋಧನಾ ಸಾಮಗ್ರಿ, ಪ್ರಯೋಗಾಲಯ ಉಪಕರಣಗಳು, ಕಂಪ್ಯೂಟರ್‌ಗಳು ಹಾಗೂ ಪೀಠೋಪಕರಣಗಳನ್ನು ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯಡಿ ಪಡೆಯಬಹುದಾಗಿದೆ.

ಶ್ರೀ ಗಂಗಾಧರ ನಾಗೇಶ್ ಭಟ್ :- ಮಾನ್ಯ ಸಚಿವರು ಉತ್ತರದಲ್ಲಿ ಹೇಳಿದ್ದಾರೆ. ನಾನು ಪ್ರಶ್ನೆಯನ್ನು ಕೇಳಿದ್ದು, ಪ್ರೌಢಶಾಲೆಗಳಲ್ಲಿ ಬಿಸಿಯೂಟದ ಸಲುವಾಗಿ ತಟ್ಟೆಗಳನ್ನು ಸರಬರಾಜು ಮಾಡುವುದು ಮತ್ತು ಡೆಸ್ಕ್, ಬೆಂಚ್‌ಗಳನ್ನು ಕೊಡುವುದರ ಬಗ್ಗೆ ಪ್ರಶ್ನೆಯನ್ನು ಮಾಡಿದ್ದೆ, ನನ್ನ ಕ್ಷೇತ್ರ ಕಾರವಾರದಲ್ಲಿ ಸುಮಾರು 25% ಪ್ರೌಢಶಾಲೆಗಳು 50% ಅನುದಾನಿತ ಶಾಲೆಗಳು ಹಾಗೆ 25% ಸರ್ಕಾರಿ ಶಾಲೆಗಳು ಇವೆ. ಆದರೆ ಅಲ್ಲಿ ಬಿಸಿಯೂಟ ಮತ್ತು ಸೈಕಲ್ ಕೊಡುವಂಥ ಒಂದು ಕಾರ್ಯಕ್ರಮದಲ್ಲಿ ಭಾಗವಹಿಸಿದಾಗ ಅಲ್ಲಿನ ಶಿಕ್ಷಕರು ಮತ್ತು ಜನರು ನಮಗೆ ಏನು ಹೇಳಿದರೆಂದರೆ, ಸರ್ಕಾರದಿಂದ ನಮಗೆ ತಟ್ಟೆಯನ್ನು ಕೊಡಲಿಲ್ಲ. ಬಿಸಿಯೂಟವನ್ನು ಕೊಟ್ಟಿದ್ದಾರೆ ಬಹಳ ಖುಷಿಯಾಗಿದೆ ಎಂದು ಹೇಳಿದರು. ಇವತ್ತು ತಟ್ಟೆ ಹಾಗು ಡೆಸ್ಕ್ ಬೆಂಚು ಅನುದಾನಿತ ಸ್ಕೂಲ್‌ಗಳಲ್ಲಿ ಇಲ್ಲ. ಅದಕ್ಕಾಗಿ ನಾನು ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿಯಿಂದ ಅದನ್ನು ಕೊಡುವುದಕ್ಕೆ ಕೇಳಿದಾಗ, ಅದಕ್ಕೆ ಸರ್ಕಾರದಿಂದ ಅವಕಾಶವಿಲ್ಲ, ಡೆಸ್ಕ್ ಹಾಗೂ ಬೆಂಚುಗಳನ್ನು Government School ಗಳಿಗೆ ಕೊಡುವುದಕ್ಕೆ ಮಾತ್ರ ಅವಕಾಶವನ್ನು ನೀಡಿದ್ದಾರೆ. ಬಿಸಿಯೂಟವನ್ನು ಅನುದಾನಿತ ಸ್ಕೂಲ್‌ಗಳಿಗೆ ಕೊಟ್ಟಿದ್ದಾರೆ, ತಟ್ಟೆಯನ್ನು ಕೊಡುವುದರಿಂದ ಸರ್ಕಾರಕ್ಕೆ ಏನು problem ಆಗುತ್ತದೆಂದು ನಾನು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಬಸವರಾಜ್ ಎಸ್. ಹೊರಟ್ಟಿ :- ಮಾನ್ಯ ಅಧ್ಯಕ್ಷರೆ, ತಟ್ಟೆ ಕೊಡುವಂಥ ಯೋಜನೆಗೆ ಯೋಜನೆ ಇಲಾಖೆಯವರು ನಮಗೆ ಅನುಮತಿಯನ್ನು ಕೊಟ್ಟಿಲ್ಲ. ಯೋಜನಾ ಇಲಾಖೆಯವರು ಯಾವ ರೀತಿಯಾಗಿ ನಿಯಮಗಳನ್ನು ಮಾಡುತ್ತಾರೆ ಆ ನಿಯಮಗಳಿಗೆ ಒಳಪಟ್ಟು ಈ ಯೋಜನೆಯನ್ನು ಪ್ರಾರಂಭ ಮಾಡಿದ್ದೇವೆ. ತಟ್ಟೆಗಳನ್ನು ಖರೀದಿ ಮಾಡುವುದು ಇದು ಸರಿಯಾದ ವ್ಯವಸ್ಥೆಯಾಗುವುದಿಲ್ಲ.

ಆದ್ದರಿಂದ ತಟ್ಟೆಯನ್ನು ಮಕ್ಕಳು ತಂದು ತೆಗೆದುಕೊಂಡು ಹೋದರೆ, ಸರಿ ಇರುತ್ತದೆ ಎನ್ನುವ ಒಂದು ದೃಷ್ಟಿಯಿಂದ ಅದನ್ನು ಮಾಡಿದ್ದೇವೆ. Planning Department ನವರನ್ನು ನಾವು ಇನ್ನೊಂದು ಸಲ ಕೇಳುತ್ತೇವೆ. ಅವರು ಅನುಮತಿಯನ್ನು ಕೊಟ್ಟರೆ ಕೊಡುತ್ತೇವೆ. ಅನುದಾನಿತ ಶಾಲೆಗಳಿಗೆ ಮಾನ್ಯ ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿಯಿಂದ ಕೊಡಬಹುದು. ಮೊದಲು ಇದಕ್ಕೆ ನಿಯಮಗಳು ಇರಲಿಲ್ಲ. ಈಗ ನಿಯಮಗಳಲ್ಲಿ ಕೊಡುವುದಕ್ಕೆ ಯಾವುದೇ ಅಭ್ಯಂತರವಿಲ್ಲ, ಕೊಡಬಹುದು. ಸಾಧ್ಯವಾದಂಥ ರೀತಿಯಲ್ಲಿ ಸರ್ಕಾರ ಕಳೆದ ಎರಡು ವರ್ಷಗಳಿಂದ ಬೆಂಚು ಹಾಗೂ ಇನ್ನಿತರ ವ್ಯವಸ್ಥೆಯನ್ನು ಮಾಡುವುದಕ್ಕೆ ಪ್ರಾರಂಭ ಮಾಡಿದೆ. ಅನುದಾನಿತ ಶಾಲೆಗಳಿಗೂ ಸಹಿತ ಈ ವ್ಯವಸ್ಥೆಯನ್ನು ಮಾಡಿರುತ್ತೇವೆ. ಸರ್ಕಾರಿ ಶಾಲೆಗಳಲ್ಲಿ ಏನು ನಿಯಮಗಳು ಇವೆ, ಆ ಎಲ್ಲಾ ನಿಯಮಗಳನ್ನು ಅನುದಾನಿತ ಶಾಲೆಗಳಿಗೆ ವಿಸ್ತರಣೆಯನ್ನು ಮಾಡಿದ್ದೇವೆ.

ಕಬಿನಿ ಎರಡನೇ ಹಂತದ ಯೋಜನೆ ಜಾರಿಗೊಳಿಸುವುದು.

113 (1185) **ಶ್ರೀ ಧೃವನಾರಾಯಣ ಆರ್. (ಸಂತೇಮರಳ್ಳಿ) :–** ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಬಿನಿ ಎರಡನೇ ಹಂತದ ಯೋಜನೆ ಜಾರಿಗೆ ತರುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಆ) ಇದ್ದಲ್ಲಿ, ಈ ಯೋಜನೆ ಜಾರಿಗೆ ತರಲು ವಿಳಂಬವಾಗಿರುವುದಕ್ಕೆ ಕಾರಣಗಳೇನು?

ಇ) ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಕೆ.ಎಸ್. ಈಶ್ವರಪ್ಪ (ಜಲಸಂಪನ್ಮೂಲ ಸಚಿವರು) :

ಅ) ಇದೆ.

ಆ) 1986–87 ರಲ್ಲಿ ಮಂಜೂರಾದ ರೂ. 390 ಕೋಟಿಗಳ ಪರಿಷ್ಕೃತ ಕಬಿನಿ ಯೋಜನೆಯಲ್ಲಿ ಕಬಿನಿ ಜಲಾಶಯದಿಂದ ಸಾಗರ ದೊಡ್ಡಕೆರೆ ಮತ್ತು ಅಪ್ಪರ್ ನುಗು ಅಣೆಕಟ್ಟಿಗೆ ನೀರೆತ್ತಿ ಅಲ್ಲಿಂದ ನಾಲೆಗಳ ಮುಖಾಂತರ ಅಚ್ಚುಕಟ್ಟು ಪ್ರದೇಶಕ್ಕೆ ನೀರೊದಗಿಸಲು ಯೋಜಿಸಿ ರೂ. 250 ಕೋಟಿ ಅವಕಾಶವನ್ನು ಮಾಡಲಾಗಿತ್ತು. ಆದರೆ, ಇದರಿಂದಾಗಿ 5188 ಎಕರೆ ರಕ್ಷಿತ ಅರಣ್ಯ ಪ್ರದೇಶ ಮುಳುಗಡೆಯಾಗುವುದರಿಂದ ಸರ್ವೆ ಮಾಡಲು ಸಹಾ ಅರಣ್ಯ ಇಲಾಖೆಯಿಂದ ಅನುಮತಿ ದೊರಕಿರಲಿಲ್ಲ. ಆದ್ದರಿಂದ ಈ ಯೋಜನೆಯ ಸರ್ವೆಕಾರ್ಯವನ್ನು ಕೈಬಿಡಲಾಯಿತು.